**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ:ಬಿಟಿಇ 01 ಇಎಪಿ 2018

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01.
ದಿನಾಂಕ:30/01/2019

**ಸುತ್ತೋಲೆ**

ವಿಷಯ: 2015 ರ ಪಠ್ಯ ಕ್ರಮದಲ್ಲಿ ತಾಂತ್ರಿಕ ಪರೀಕ್ಷಾ ಮಂಡಳಿ ಮೂಲಕ 'ಹೈಟೆಕ್ ಪ್ರಿಂಟ್ ಸಿಸ್ಟಂ ಲಿಮಿಟೆಡ್', ಪೆಡಾವುತಪಳ್ಳಿ , ಕೃಷ್ಣಾ ಜಿಲ್ಲೆ, ಆಂಧ್ರಪ್ರದೇಶ ವರಿಂದ ಸ್ವೀಕರಿಸಲಾದ ಅಂಕಪಟ್ಟಿಗಳ ಮಾಹಿತಿಯ ಡೆಲಿವರಿ ಚಲನ್‌ನ್ನು ಸಂಸ್ಥೆಯ ಪ್ರಿನ್ಸಿಪಾಲರು ದೃಢೀಕರಿಸಿ ಈ ಕಛೇರಿಗೆ ಕಳುಹಿಸುವ ಬಗ್ಗೆ.

ಉಲ್ಲೇಖ: 1) 'ಹೈಟೆಕ್ ಪ್ರಿಂಟ್ ಸಿಸ್ಟಂ ಲಿಮಿಟೆಡ್', ಪೆಡಾವುತಪಳ್ಳಿ , ಕೃಷ್ಣಾ ಜಿಲ್ಲೆ, ಆಂಧ್ರಪ್ರದೇಶ ಇವರ ವಿವಿಧ ದಿನಾಂಕಗಳ ಪತ್ರಗಳು.
2) ಈ ಕಛೇರಿಯ ಸುತ್ತೋಲೆ ಸಂ: ಬಿಟಿಇ 01 ಇಎಪಿ 2018, ದಿ:19/01/2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಂದ 2015 ರ ಪಠ್ಯಕ್ರಮದ ಅಂಕಪಟ್ಟಿಗಳನ್ನು ಮುದ್ರಿಸಿ ಎಲ್ಲಾ ಸಂಸ್ಥೆಗಳಿಗೆ ತಲುಪಿಸಿ ಸ್ವೀಕೃತಿ ನೀಡುವಂತೆ ಸೂಚಿಸಲಾಗಿತ್ತು. ಅದರಂತೆ 'ಹೈಟೆಕ್ ಪ್ರಿಂಟ್ ಸಿಸ್ಟಂ ಲಿಮಿಟೆಡ್', **ಪೆಡಾವುತಪಳ್ಳಿ , ಕೃಷ್ಣಾ ಜಿಲ್ಲೆ, ಆಂಧ್ರಪ್ರದೇಶ ಇವರು ತಮ್ಮ ಸಂಸ್ಥೆಗಳಿಗೆ 'ವಿಡಿಪಿ' ಅಂಕಪಟ್ಟಿಗಳನ್ನು ಕಳುಹಿಸಿಕೊಡಲಾಗಿದ್ದು, ಸದರಿ ಒಟ್ಟು ಅಂಕಪಟ್ಟಿಗಳನ್ನು ಸ್ವೀಕರಿಸಿರುವ ಬಗ್ಗೆ ಡೆಲಿವರಿ ಚಲನ್‌ನ್ನು ದೃಢೀಕರಿಸಿ ತುರ್ತು ಅಂಚೆ ಮೂಲಕ ತಾಂತ್ರಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಯವರಾದ** ಶ್ರೀಮತಿ ರಾಗಿಣಿ.ಬಿ.ಆರ್ ಇವರ ವಿಳಾಸಕ್ಕೆ ದಿನಾಂಕ:28/01/2019 ರೊಳಗಾಗಿ ತುರ್ತಾಗಿ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳ ಪ್ರಿನ್ಸಿಪಾಲರು ವೈಯಕ್ತಿಕ ಗಮನಹರಿಸಿ ಸ್ವೀಕೃತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಉಲ್ಲೇಖ(2) ರಲ್ಲಿ ತಿಳಿಸಲಾಗಿತ್ತು. ಕೆಲವೊಂದು ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ಈಗಾಗಲೇ ಈ ಕಛೇರಿಗೆ ದೃಢೀಕರಿಸಿದ ಡೆಲಿವರಿ ಚಲನ್‌ನ್ನು ಕಳುಹಿಸಿರುತ್ತಾರೆ. ಆದರೆ ಕೆಲವೊಂದು ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು ಇಲ್ಲಿಯವರೆಗೂ ದೃಢೀಕರಿಸಿದ ಡೆಲಿವರಿ ಚಲನ್‌ಗಳನ್ನು ಕಳುಹಿಸಿರುವುದಿಲ್ಲ. ಕಾರಣ ತುರ್ತಾಗಿ ದೃಢೀಕರಿಸಿದ ಡೆಲಿವರಿ ಚಲನ್‌ನ್ನು ಕಾರ್ಯದರ್ಶಿಯವರ ವಿಳಾಸಕ್ಕೆ ತುರ್ತು ಅಂಚೆಯ ಮೂಲಕ ದಿನಾಂಕ:02/02/2019 ರೊಳಗೆ ತಲುಪಿಸುವಂತೆ ಸಂಬಂಧಪಟ್ಟ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಇಲ್ಲದಿದ್ದ ಪಕ್ಷದಲ್ಲಿ ತಮ್ಮ ಸಂಸ್ಥೆಯ ಹೆಸರನ್ನು ಬಿಟಿಇ ಲಿಂಕ್ಸ್‌ನಿಂದ ತೆಗೆದು ಹಾಕಲಾಗುವುದು. ಹಾಗು ಇದರ ಒಂದು ಪ್ರತಿಯನ್ನು ಕಾರ್ಯದರ್ಶಿಯವರ ಮೇಲು ವಿಳಾಸ btejdexam@gmail.com ಗೆ ಸ್ಕ್ಯಾನ್ ಮಾಡಿ ಕಳುಹಿಸುವುದು.

**ಕಾರ್ಯದರ್ಶಿ**

ಇವರಿಗೆ,

ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮುಂದಿನ ಕ್ರಮಕ್ಕಾಗಿ.

eap sv